



# ಬಣ್ಣ ಗ್ಲಾಮರ್ ಇರೋತನಕ ಅಷ್ಟೆ

## ದೀಪ್ತಿ

### ಕಲರ್ಸ್ ಕನ್ನಡದ ‘ಪದ್ಮಾವತಿ’ಯ ತುಳಸಿ

★ *ವೃತ್ತಿ ಜೀವನದ ಆರಂಭ ಹೇಗಿತ್ತು?*

ನಟಿಯಾಗುವ ಉದ್ದೇಶವೂ ಇರಲಿಲ್ಲ, ಯೋಚನೆಯೂ ಇರಲಿಲ್ಲ. ಫ್ಯಾಷನ್ ಡಿಸೈನಿಂಗ್ ಪದವಿ ಓದುತ್ತಿದ್ದಾಗಲೇ ತಮಿಳು ಸಿನಿಮಾದಲ್ಲಿ ಅವಕಾಶವೊಂದು ಬಂತು. ಮನೆಯವರ ಸಣ್ಣ ಪ್ರತಿರೋಧದ ನಡುವೆ ಅವರ ಬೆಂಬಲ ಪಡೆದು ಕಾಲಿಟ್ಟೆ. ಮೊದಲ ದಿನಗಳು ನನಗೆ ಏನೂ ಗೊತ್ತಿರಲಿಲ್ಲ. ಹೇಳಿದ್ದನ್ನು ಮಾಡುವುದಷ್ಟೇ ನನ್ನ ಕಾಯಕವಾಗಿತ್ತು. ತಮಿಳು ಕೂಡ ಅರ್ಥ ಆಗುತ್ತಿರಲಿಲ್ಲ. ಕ್ಯಾಮೆರಾ ಗೊತ್ತಿರಲಿಲ್ಲ. ಅರೆ ಕ್ಷಣವೂ ಭಯ ಎನ್ನುವುದು ನನ್ನನ್ನು ಕಾಡಲಿಲ್ಲ. ಬೋರ್ ಹೊಡಿಸಲಿಲ್ಲ.

★ *‘ಪದ್ಮಾವತಿ’ಯತ್ತ ಒಲವು ಮೂಡಿದ್ದ್ಯಾಕೆ?*

ಪದ್ಮಾವತಿಯಲ್ಲಿ ಪ್ರಧಾನ ಪಾತ್ರ ನನ್ನದು. ‘ಪದ್ಮಾವತಿ’ಯ ಕಥೆ ಇಷ್ಟ ಆಯಿತು. ಅದರಲ್ಲಿ ತುಳಸಿ ಪದ್ಮಾವತಿಯ ಭಕ್ತೆ. ಆಪ್ತ ಗೆಳತಿ. ಎಲ್ಲ ಕಾರ್ಯದಲ್ಲಿ ಆಕೆ ನೆರವಾಗುತ್ತಾಳೆ ಎನ್ನುವುದು ನನ್ನ ನಂಬಿಕೆ. ಪದ್ದು ನೆರವು ಇದ್ದೇ ಇದೆ ಎಂದು ಎಂತಹ ಕಠಿಣ ಕಾರ್ಯಕ್ಕೂ ಮುಂದಾಗುತ್ತೇನೆ. ಒಂದು ರೀತಿಯಲ್ಲಿ ತುಳಸಿಯದು ಆತ್ಮವಿಶ್ವಾಸ ಬಿಂಬಿಸುವ ಪಾತ್ರ. ಆದರ್ಶ ಕೂಡ ಹೌದು. ಸಮಸ್ಯೆಗಳು, ಕಷ್ಟಗಳು ಎದುರಾದಾಗ ದುಃಖಿಸಿದರೂ ಧೈರ್ಯದಿಂದ ಎದುರಿಸುತ್ತಾಳೆ. ಇದು ಇಷ್ಟವಾಯಿತು.

★ *ತುಳಸಿಯಂತಹ ವ್ಯಕ್ತಿತ್ವ ನಿಮ್ಮದಾ?*

ನನ್ನ ಪಾಲಿನ ಪ್ರತಿಕ್ಷಣವನ್ನು ಅನುಭವಿಸುವುದು ನನ್ನ ಗುಣ. ಪೂರ್ಣ ಜಾಯ್‌ಫುಲ್ ವ್ಯಕ್ತಿತ್ವ ನನ್ನದು. ಸಂತೋಷದಿಂದ ನನ್ನಿಷ್ಟದಂತೆ ನಾನು ಬದುಕುತ್ತಿದ್ದೇನೆ. ಚಿಕ್ಕ ವಯಸ್ಸಿನಿಂದಲೂ ಹಾಗೆಯೇ ಇದ್ದೇನೆ. ಅಭಿಪ್ರಾಯಗಳನ್ನು ಸಂದರ್ಭಕ್ಕೆ ಅನುಸಾರವಾಗಿಯೇ ತೆಗೆದುಕೊಳ್ಳುತ್ತೇನೆ. ನನ್ನನ್ನು ನಿಯಂತ್ರಿಸುವುದು ನೈತಿಕ ಪ್ರಜ್ಞೆ ಮಾತ್ರ. ಮಾನವೀಯ ಮೌಲ್ಯಗಳನ್ನು ಪಾಲಿಸುತ್ತೇನೆ.

★ *ಪೋಷಕರು ಈಗ ಏನೆನ್ನುತ್ತಾರೆ?*

ಗಂಗಾಧರ ರಾವ್ (ಅಪ್ಪ) ಲಕ್ಷ್ಮಿ (ಅಮ್ಮ). ದಾವಣಗೆರೆಯವರು ನಾವು. ಪಿಯುವರೆಗೆ ಅಲ್ಲೇ ಓದಿದೆ. ನಂತರ ನಮ್ಮ ತಂದೆ ಬೆಂಗಳೂರಿಗೆ ಬಂದು ನೆಲೆಸಿದರು. ಅವರು ನನ್ನ ಬಗ್ಗೆ ಬೇರೆಯ ಕನಸುಗಳನ್ನು ಹೊತ್ತಿದ್ದರು. ಉನ್ನತ ಶಿಕ್ಷಣವನ್ನು ಮಾಡಲು ವಿದೇಶಕ್ಕೆ ಕಳುಹಿಸಬೇಕು ಎಂದುಕೊಂಡಿದ್ದರು. ಅದು ಎಲ್ಲಿ ಕೈಗೂಡುವುದಿಲ್ಲವೋ ಎನ್ನುವ ಆತಂಕದಲ್ಲಿ ವಿರೋಧದ ನಡುವೆ ನನ್ನಿಷ್ಟವನ್ನು ಬೆಂಬಲಿಸುತ್ತಿದ್ದಾರೆ.

★ *ನಟಿಯಾಗಿಯೇ ನೆಲೆಗೊಳ್ಳುತ್ತೀರಾ?*

ವೃತ್ತಿ ಎಂದು ಇದನ್ನು ನಾನು ತೆಗೆದಕೊಳ್ಳುವುದಿಲ್ಲ ಅನ್ನಿಸುತ್ತೆ. ಇದು ಪ್ರವೃತ್ತಿ ಮಾತ್ರ. ಇಲ್ಲಿ ಬೇಡಿಕೆ ಎನ್ನುವುದು ಗ್ಲಾಮರ್ ಇರುವ ತನಕ ಮಾತ್ರ. ನಂತರ ಅವಕಾಶಗಳು ಕಡಿಮೆಯಾಗಬಹುದು. ಇಲ್ಲವೇ ಏಕತಾನತೆಯ ಕಾರಣಕ್ಕೆ ನಾನೇ ವಿಮುಖಳಾಗಬಹುದು. ಇದು ಸದ್ಯ ನನ್ನ ತಾತ್ಕಾಲಿಕ ನೆಲೆ. ಮುಂದೆ ಸ್ವಂತ ವ್ಯವಹಾರವನ್ನು ಮಾಡಬೇಕು ಎಂದುಕೊಂಡಿದ್ದೇನೆ.

■ ರಾಗು